ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರ ಸಚಿವರು):

ಅ) ಹೌದು ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ವರದಿ ನೀಡಲು ಶ್ರೀ ಸದಾಶಿವ ಒಡೆಯರ್‌ರವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಆಯೋಗ ರಚಿಸಿದ್ದು ಸದರಿ ಆಯೋಗ ವರದಿಯನ್ನು ಸಲ್ಲಿಸಿದೆ.

ಆ) ಈ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಕರಡು ಮಸೂದೆಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಿ ಅಂಗೀಕಾರ ಪಡೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ನಡೆದಿರುವ ಕೋಮು ಗಲಭೆಗಳ ಬಗ್ಗೆ

877 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1990ರ ಆಗಸ್ಟ್‌ನಿಂದ 1991ರ ಜನವರಿವರೆಗೆ ನಡೆದಿರುವ ಕೋಮು ಗಲಭೆಗಳೆಷು?

ಆ) ಯಾವ ಯಾವ ಪ್ರದೇಶಗಳಲ್ಲಿ ಈ ಕೋಮು ಗಲಭೆಗಳು ನಡೆದಿದೆ.

ಇ) ಈ ಸಂದರ್ಭಗಳಲ್ಲಿ ಎಷು ಜನ ಮಡಿದಿದ್ದಾರೆ;ಎಷು ಜನ ಗಾಯಗೊಂಡಿದ್ದಾರೆ;

ಈ) ಹೀಗೆ ಮಡಿದವರ ಕುಟುಂಬಗಳಿಗೆ, ಗಾಯಗೊಂಡವರಿಗೆ ಎಷ್ಟೆಷ್ಟು ಪರಿಹಾರ ನೀಡಲಾಗಿದೆ;

ಉ) ಈ ಸಂಬಂಧ ಮನೆ ಕಳೆದುಕೊಂಡವರಿಗೆ ಮನೆಗಳನ್ನು ಕಟ್ಟಿಸಿಕೊಡಲಾಗಿದೆಯೇ?

ಶ್ರೀ ಧರ್ಮಸಿಂಗ್ (ಗೃಹಸಚಿವರು):

ಅ) 118

ಆ) ಈ ಕೋಮು ಗಲಭೆಗಳು ನಡೆದಿರುವ ಜಿಲ್ಲೆಗಳಿಂದರೆ, ಬೆಂಗಳೂರು, ಕೋಲಾರ, ಚಿತ್ರದುರ್ಗ, ಹಾಸನ, ಕೊಡಗು, ತುಮಕೂರು, ಮೈಸೂರು, ಮಂಡ್ಯ, ಧಾರವಾಡ, ಶಿವಮೊಗ್ಗ, ಗುಲ್ಬರ್ಗಾ, ರಾಯಚೂರು, ಚಿಕ್ಕಮಗಳೂರು ಮತ್ತು ಬಿಜಾಪುರ.

ಇ) ಸದರಿ ಅವಧಿಯಲ್ಲಿ 72ಜನ ಮೃತಪಟ್ಟಿದ್ದು, 657ಜನರು ಗಾಯಗೊಂಡಿದ್ದಾರೆ.

ಈ) ಮಡಿದವರ ಕುಟುಂಬಗಳಿಗೆ ರೂ. 34,50,000ಗಳನ್ನು ಮತ್ತು ಗಾಯಗೊಂಡವರಿಗೆ 4,02,500-00 ಗಳನ್ನು ಪರಿಹಾರವನ್ನಾಗಿ ನೀಡಲಾಗಿದೆ.

ಉ) ಇಲ್ಲ.

ಹೆಣ್ಣುಮಕ್ಕಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವಿಕೆ ಬಗ್ಗೆ.

8 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆಣ್ಣು ಮಕ್ಕಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದರ ಬಗ್ಗೆ ಯೋಜನೆಯನ್ನು ರೂಪಿಸಲು ಸರ್ಕಾರದ ಮುಂದೆ ಸಲಹೆ ಏನಾದರೂ ಇದೆಯೆ?

ಆ) ಹಾಗಿದ್ದಲ್ಲಿ ಅಂತಹ ಯೋಜನೆಯ ವಿವರಗಳೇನು?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು):

ಅ) ಇದೆ.

ಅ) 1) ಹೆಣ್ಣು ಮಕ್ಕಳು ವೃತ್ತಿ ತರಬೇತಿ ಕೈಗೊಳ್ಳಲು ಆರ್ಥಿಕ ಸಹಾಯ ಯೋಜನೆಯನ್ನು ರೂಪಿಸಲಾಗುತ್ತಿದೆ ಉದಾ; ಐಟಿಐ, ಡಿಪ್ಲೋಮ, ಕಂಪ್ಯೂಟರ್ ತರಬೇತಿ, ಹೊಲಿಗೆ, ಬೆರಳಚ್ಚು, ಸೆಕ್ರಟರಿಯಲ್ ಡಿಪ್ಲೋಮ, ರೆಡಿಯೋ, ಟಿ.ವಿ. ರಿಪೇರಿ; ಇತ್ಯಾದಿ.

2) ಜಿಲ್ಲಾ ಮಟದಲ್ಲಿ ಹೆಣ್ಣು ಮಕ್ಕಳಿಗೆ ಅಕ್ಷರಸ್ತರಾಗಲು ಅನುವಾಗುವಂತೆ ಜಿಲ್ಲಾ ಮಟದಲ್ಲಿ ಹೆಣ್ಣುಮಕ್ಕಳ ಹಾಸ್ಟಲ್ ಸೌಕರ್ಯವನ್ನು ಒದಗಿಸಲು ಯೋಜನೆಯನ್ನು ರೂಪಿಸಲಾಗುತ್ತಿದೆ.

ರಾಜ್ಯದಲ್ಲಿ ನಡೆದ ಗುಂಪು ಘರ್ಷಣೆಗಳ ಬಗ್ಗೆ.

21 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ; 1-1-1990ರಿಂದ 1990ಡಿಸೆಂಬರ್ ತಿಂಗಳು ಕೊನೆಯವರಿವಿಗೆ ಗುಂಪು ಘರ್ಷಣೆಗಳಲ್ಲಿ ತೊಡಗಿದ್ದವರ ಮೇಲೆ ಹೂಡಿರುವ ಮೊಕದ್ದಮೆಗಳ ಒಟು ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು)

ಆ) ಅವುಗಳಲ್ಲಿ ಇಂಡಿಯನ್ ಪೀನಲ್ ಕೋಡ್ ಸೆಕ್ಷನ್ 302ರ ಪ್ರಕಾರ ಹಾಕಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಇ) ಗುಂಪು ಘರ್ಷಣೆಗಳಲ್ಲಿ ಸತ್ತವರು ನಾನಾ ಕಾರಣಗಳಿಗಾಗಿ ನಿಧನ ಹೊಂದಿದ್ದರೂ ಸಹ ಆಮಾಯಕರುಗಳ ಮೇಲೆ ಮೊಕದ್ದಮೆಗಳು ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವು ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹಸಚಿವರು):

ಅ) ಒಟು 2161 ಮೊಕದ್ದಮೆಗಳನ್ನು ಹೂಡಿದ್ದು, ಜಿಲ್ಲಾವಾರು ವಿವರ ಈ ಕೆಳಗಿನಂತಿದೆ.

ಕ್ರ.ಸಂ. ಜಿಲ್ಲೆಯ ಹೆಸರು	*ಮೊಕದ್ದಮೆಗಳ ಸಂಖ್ಯೆ*
1) ಬೆಂಗಳೂರು ಜಿಲ್ಲೆ	588
2) ಬೆಳಗಾಂ	-
3) ಕೋಲಾರ	365
4) ಶಿವಮೊಗ್ಗ	30
5) ಬೆಂಗಳೂರು ನಗರ	17
6) ತುಮಕೂರು	158
7) ಹಾಸನ	170
8) ಮೈಸೂರು	153
9) ಕಾರವಾರ	-
10) ಧಾರವಾಡ	26
11) ಬೀದರ್	13
12) ಬಳ್ಳಾರಿ	1
13) ದಕ್ಷಿಣ ಕನ್ನಡ	51